# ಬಹುರೂಪಿ ಬಾಳೆನಾರು

## ಫ್ಯಾಷನ್ ಲೋಕಕ್ಕೆ ಲಗ್ಗೆ!



**ಬಾಳೆನಾರು ಫ್ಯಾಷನ್ ಜಗತ್ತಿಗೆ ಲಗ್ಗೆ ಇಟ್ಟಿದೆ. ಬಾಳೆ ನಾರು ಬಳಸಿ ಶರ್ಟ್, ಕುರ್ತಾ, ಬ್ಯಾಗ್‌ಗಳಲ್ಲದೆ ಬಾಕ್ಸ್, ವಾಲ್ ಹ್ಯಾಂಗಿಂಗ್ಸ್, ಬ್ಯಾಗ್ ಮುಂತಾದ ಫ್ಯಾಷನು ಆ್ಯಸೆಸರೀಸ್ ಕೂಡ ತಯಾರಿಸಬಹುದು. ಪರಿಸರ ಸ್ನೇಹಿ ಉತ್ಪನ್ನಗಳಿಗೆ ಇದೀಗ ಬಾಳೆನಾರು ಸೇರ್ಪಡೆ; ಜತೆಗೆ ಫ್ಯಾಷನ್ ಲೋಕಕ್ಕೆ ಕೂಡ!**

**ಹರೀಶ್ ಹಳೆಮನೆ**

ಬಾಳೆನಾರು ಎಂದರೆ ಒಂದು ಕಾಲದಲ್ಲಿ ಯಾರಿಗೂ ಬೇಡ. ಈ ವಸ್ತುವಿಗೀಗ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹಳ ಬೇಡಿಕೆಯಿದೆ ಎಂದರೆ ಅಚ್ಚರಿಯಾಯಿತೇ? ಬಳಸದೇ ಬಿಸಾಕುವ ಬಾಳೆನಾರಿನ ವಿವಿಧ ಉತ್ಪನ್ನಗಳು ಇದೀಗ ಪ್ರಚಲಿತಗೊಳ್ಳುತ್ತಲಿವೆ. ಹೂವಿನೊಂದಿಗೆ ನಾರು ಕೂಡ ಸ್ವರ್ಗಕ್ಕೇರಲು ಪ್ರಯತ್ನ ನಡೆಸಿದೆ.

ಮಲ್ಲಿಗೆ ಹೂಗಳನ್ನು ಕಟ್ಟಿ ಮಾಲೆ ಮಾಡಲು ಬಹಳ ಹಿಂದಿನಿಂದಲೂ ಬಾಳೆನಾರನ್ನು ಉಪಯೋಗಿಸುತ್ತಿದ್ದರು. ಮಲ್ಲಿಗೆಯಂತಹ ಹೂಗಳನ್ನು ಮಾಲೆ ಮಾಡಲು ಬಳಸುವ ವಿಚಾರ ಬಿಟ್ಟರೆ ಬಾಳೆಯ ನಾರಿನ ಇತರ ಉಪಯೋಗ ನಮಗೆ ತಿಳಿದದ್ದು ಕಡಿಮೆ. ಹೆಚ್ಚು ಹೆಚ್ಚು 'ಇಕೋ ಕಾನ್ಷಿಯಸ್' ಆಗುತ್ತಿರುವ ಜನರಿಂದಾಗಿ ಇಂತಹ ಇಕೋ ಕಾನ್ಷಿಯಸ್ ಉತ್ಪನ್ನಗಳು ಇಂದು ಮಾರುಕಟ್ಟೆಗೆ ಲಗ್ಗೆಯಿಡಲು ತೊಡಗಿವೆ. 'ಬನಾನಾ ಫೈಬರ್' ಅಂತಹ ವಸ್ತುಗಳಲ್ಲೊಂದು.

ಆಫ್ರಿಕಾದ ಕೀನ್ಯಾ ದೇಶದಲ್ಲಿ ಒಣಗಿದ ಬಾಳೆನಾರನ್ನು ಕತ್ತರಿಸಿ ಅದರ ಮೇಲೆ ಚಿತ್ರಗಳನ್ನು ಬರೆದು ಗೋಡೆಯ ಮೇಲೆ ತೂಗು ಹಾಕುವಂತಹ 'ವಾಲ್ ಹ್ಯಾಂಗಿಂಗ್'ಗಳನ್ನು ತಯಾರಿಸುತ್ತಾರೆ. ನಾರನ್ನು ಸುತ್ತಿ ಸುತ್ತಿ ಕಪ್‌ಗಳು, ಪೆನ್ ಸ್ಟ್ಯಾಂಡ್‌ಗಳು ಮುಂತಾದವನ್ನು ತಯಾರಿಸುತ್ತಾರೆ. ಹಿಂದಿನ ಕಾಲದಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಅಲ್ಲಿ ಇಂತಹ ವಸ್ತುಗಳನ್ನು ತಯಾರಿಸುವ ಕಲಾವಿದರು ಇದ್ದರಂತೆ. ಆದರೆ, ಆಫ್ರಿಕಾ ದೇಶವನ್ನು ಬಹಳಷ್ಟು ಹಿಂಡಿ ಹಿಪ್ಪೆ ಮಾಡಿದ 'ಏಡ್ಸ್' ಮಾರಿಯಿಂದಾಗಿ ಇಂತಹ ಕಲಾವಿದರ ಸಂಖ್ಯೆ ಗಣನೀಯವಾಗಿ ಕುಸಿದಿದೆಯಂತೆ. ಬಾಳೆಕಾಯಿ, ಹಣ್ಣಿನಿಂದ ಏಡ್ಸ್‌ಗೆ ಔಷಧ ತಯಾರಿಸುತ್ತಾರೆ ಎಂಬಂತೆಯೇ ಬಾಳೆಯ ನಾರಿನಿಂದ ಕಲಾಕೃತಿ ತಯಾರಿಸುವವರು ಕಣ್ಮರೆಯಾದದ್ದೂ ಇದೇ ಏಡ್ಸ್‌ನಿಂದ ಎಂಬುದು ಮಾತ್ರ ಪ್ರಕೃತಿಯ ವಿಪರ್ಯಾಸವೇ ಹೌದು!

ಆಗ್ನೇಯ ಏಶಿಯಾದ ದೇಶಗಳಲ್ಲಿ ಬಾಳೆನಾರಿನಿಂದ 'ಜುಸಿ' ಎಂಬ ಹೆಸರಿನ ಬಟ್ಟೆಗಳನ್ನು ತಯಾರಿಸುತ್ತಾರೆ. ಈ ಬಟ್ಟೆಯ ತಯಾರಿಯಲ್ಲಿ ರೇಶ್ಮೆಯೊಂದಿಗೆ

